ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಡಿ.ಆರ್. ಪಾಟೀಲ್‌ರವರು ಬಹಳ ಹಿರಿಯರಿದ್ದಾರೆ. ಅವರು ಹೇಳಿದ ವಿಚಾರ ಬಹುಶಃ ಸತ್ಯವಾಗಿರುವಂಥದ್ದು. ಸಣ್ಣ ಕೈಗಾರಿಕೆಗಳಿಗೆ ಹಣ ಬಿಡುಗಡೆ ಮಾಡುವುದರಲ್ಲಿ ಸರ್ಕಾರ ವಿಳಂಬ ಮಾಡುವುದಿಲ್ಲ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ 124.10 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಹಾಗೆಂದು ಹೇಳಿ ನಾವೇನೂ ನಿರ್ಲಕ್ಷ್ಯ ಮಾಡಿಲ್ಲ. ಸರ್ಕಾರ ಅಸ್ತಿತ್ವಕ್ಕೆ ಬಂದ 15 ದಿವಸಗಳಲ್ಲಿಯೇ ನಾವು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದು ಆದ ಮೇಲೆ ಎರಡು ಕಂತಿನಲ್ಲಿ ಒಟ್ಟಾರೆ 124.50 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಮಾನ್ಯ ಆರ್ಥಿಕ ಸಚಿವರಲ್ಲಿ ನಾಳೆ ನಾಡಿದ್ದು ಕೇಳಿ ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ತಮಗೆ ತಿಳಿಸುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ತಮ್ಮಲ್ಲಿ ಒಂದು ವಿನಂತಿ. ಇದಕ್ಕೆ ಸಂಬಂಧವಿಲ್ಲದಿದ್ದರೂ ಕೂಡ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಮುಂಡರಗಿ ಕೆ.ಐ.ಎ.ಡಿ.ಬಿ.ಯೊಳಗೆ ಜಾಗ ಖರೀದಿ ಮಾಡಿದ್ದಾರೆ. ಅಲ್ಲಿ ಜಾಲಿ ಬೆಳೆಯುತ್ತಿದೆ. ಆ ನಂತರ ಆ ಜಾಗದಲ್ಲಿ 4 ಎಕರೆಯನ್ನು ಐ.ಟಿ.ಐ.ಗೆ ಕೊಡಿಸಿದಿರಿ. ಐ.ಟಿ.ಐ.ನವರು ಬಂದು ತಮಗೆ ರೊಕ್ಕವನ್ನೂ ಕೂಡ ತುಂಬಿದ್ದಾರೆ, ಅದೇ ಡಿಪಾರ್ಟ್‌ಮೆಂಟ್‌ನವರು. ಬಡ್ಡಿ ಕೊಟ್ಟಿಲ್ಲವೆಂದು ಹೇಳಿ ಅದನ್ನು ಬಿಟ್ಟುಕೊಡುತ್ತಿಲ್ಲ. ಇದರಿಂದಾಗಿ ಅಲ್ಲಿ ಬಿಲ್ಡಿಂಗ್ ಆಗುತ್ತಿಲ್ಲ. ಆದುದರಿಂದ ದಯವಿಟ್ಟು ಬಡ್ಡಿ ಬಿಡಬೇಕೆಂದೂ ಕೂಡ ನಿಮ್ಮ ರೂಲ್ಸ್‌ನಲ್ಲಿ ಇದೆ, ಹೇಳಿದ್ದಾರೆ. ಆದುದರಿಂದ ದಯವಿಟ್ಟು ಅದನ್ನು ಬಿಡುವುದಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇನ್ನು ಮೂರ್ನಾಲ್ಕು ದಿವಸಗಳಲ್ಲಿ ಸಂಬಂಧ ಪಟ್ಟ ಅಧಿಕಾರಿಗಳನ್ನು ಕರೆದು ತೀರ್ಮಾನವನ್ನು ತೆಗೆದುಕೊಂಡು ತಮಗೆ ತಿಳಿಸುತ್ತೇನೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವುದು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ 05.02.2007 ರಂದು 5 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 123 ಪ್ರಶ್ನೆಗಳ ಪೈಕಿ 92 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.